ಕನ್ಯಾನ ಅಲಂಕಾರ ಮಾಡಿ ದೈವದ ಅಕ್ಕಿಕಾಳಿಗಿ ಕರಕೊಂಡ ಹ್ವಾದ್ರ, ಗೋಕಾಕನಿಂದ ಬಂದ ಬೀಗರ ಮಂದಿ ಮುಂಜ್ಯಾನಿ ನ್ಯಾರಿ ಇಲ್ಲದ ಹಸದ ಕಣ್ಣ ತಿರಗಾಕ ಹತ್ತಿದ್ದವು. ತಡಮಾಡಲಾರದ ಗಂಡು ಹೆಣ್ಣು ಕೂಡೇ ಉಪ್ಪಿಟ್ಟಿಗಿ ಕ್ಯೂ ಹಚ್ಚಿದರು, ಭರ್ಜರಿ ಮಂದೀ ನೋಡಿ ಅಡುಗೆ ಉಸ್ತುವಾರಿಯ ಸಿದ್ನಾಳ ಫಕೀರಪ್ಪ ಎಲ್ಲಾರಿಗೂ ಸಾಲುವ್ಹಾಂಗ ಉಪ್ಪಿಟ್ಟ ಮಾಡಿ ಇಟ್ಟಿದ್ದಾ, ಹೀಂಗಾಗಿ ಜನಾ ಉಪ್ಪಿಟ್ಟ ಹೊಡದರು. ಚಾ ಕುಡಿದ ಮಂಟಪದ ಕಡೆ ಬಂತು, ಹನ್ನೆರಡಕ್ಕ ಅಕ್ಕಿಕಾಳ ಬೀಳುವದಿತ್ತು, ಸಕಲ ಸಿದ್ಧತೆಗಳು ಸಾಂಗವಾಗಿ ನಡೆದಿದ್ದವು. ಇಡೀ ಮಂಟಪ ಭರ್ಜರಿಯಾಗಿ ತುಂಬಿಕೊಂಡಿತ್ತು. ನಿಂತ ಮಂದಿಗಿ ಕಬ್ಬಣ ಬುಟ್ಯಾಗ ಅಕ್ಕಿಕಾಳ ತುಂಬಿಕೊಂಡಿದ್ದ ಹತ್ತಾರು ಜನಾ ಎಲ್ಲಾರಿಗೂ ಅಕ್ಕಿಕಾಳ ಕೊಡಲಾಕ ಶುರುಮಾಡಿದರು. ಗುಡಿ ಮುಂದಿನ ಬಟಾ ಬಯಲಾಗ ಹಾಕಿದ್ದ ಕಲ್ಯಾಣ ಮಂಟಪ ತುಂಬಿ ತುಳುಕತಿತ್ತು. ಎಲ್ಲಾರ ಕೈಯಾಗು ಅಕ್ಕಿಕಾಳು ಬಂದಿದ್ದವು. ಊದಾವರು, ಬಾರಸಾವರು 'ಚೆನ್ನಪ್ಪ ಚನ್ನಗೌಡ' ನುಡಿಸತಿದ್ದರು, ಧಣೇರ ಮಗಾ ವರ ಮತ್ತ ಗೋಕಾಕದ ವಧುವನ್ನು ಅಲಂಕಾರ ಮಾಡಿಕೊಂಡು ಸ್ಟೇಜ್ ಮಾಲ್ಯ ಕರಕೊಂಡ ಬಂದ್ರು, ಕೂಡಿದ ಮಂದಿ ಹುಡುಗ ಹ್ಯಾಂಗ ಅದಾನ, ಹುಡುಗಿ ಹ್ಯಾಂಗ ಅದಾಳ ಅಂತಾ ಕಣ್ಣ ಬಿಟ್ಟ ನೋಡಿದರು. ಕಣ್ಣು ಮೂಗಿನಿಂದ ಚೆಲುವೆಯಾದ ಕನ್ಯಾನ ನೋಡಿ, ಧಣೇರು ಜೋಡಿ ಚಲೋ ಕೂಡಿಸ್ಯಾರ ಅಂದು ಖುಷಿಗೊಂಡರು.

ಇನ್ನೇನು ತಾಳಿಕಟ್ಟುವ ವೇಳೆ, ಹಾರ ಬದಲಾಯಿಸುವ ವೇಳೆ, ಮುಹೂರ್ತ ಮೀರಬಾರದೆಂದು ಭಡಜಿ ಮಂತ್ರವನ್ನು ಅವಸರವಸರವಾಗಿಯೇ ಚಾಲೂ ಮಾಡಿದರು. 'ಮಾಂಗಲ್ಯಂ ತಂತು ನಾನೇನ ಮಮಜೀವನ ಹೇತುನಾ... ಕಂಠೇ ಬದ್ನಾಮಿ ಸುಭಗೇ ತ್ವಂ ಜೀವಶರದಶ್ಯತಮ್...' ಎಂದು ಶುರು ಮಾಡಬೇಕು, ಎಲ್ಲರೂ ಅಕ್ಕಿಕಾಳ ಹಾಕಿ ಹರಸಬೇಕು ಅನ್ನೋ ಹೊತ್ತಿಗೆ ಸರಿಯಾಗಿ ಮಂಟಪದ ಮಗ್ಗುಲಲ್ಲಿಯೇ ಹಾಯ್ದು ಏಳೆಂಟು ಕಾರು, ಹತ್ತಾರು ಜೀಪುಗಳು ಪೌ ಪೌ, ಬೌವ್ ಬೌವ್ ಅಂತ ಹಾರ್ನ್ ಮಾಡುತ್ತ ಮುಂದೆ ಹ್ವಾದವು, ಯಾರೋ ಚೀರಿ ಹೇಳಿದರು, 'ಹೋ... ಅನಂತನಾಗ ಬಂದಾನ, ಲಕ್ಷ್ಮೀ ಬಂದಾಳ' ಎಂದು ಚೀರಿದಾಗ ಮಂಟಪದಲ್ಲಿ ನಿಂತ ಮಂದೀ ಗಾಡಿ ಬೆನ್ನು ಹತ್ತಿ ಓಡತೊಡಗಿದರು. ಎಲೆಕ್ಷನ್ ಪ್ರಚಾರಕ್ಕೆ

